ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक-संस्कृत-विश्वविद्यालय:
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/ಪ್ರ.ಸ/2016-17/2869-26

ದಿನಾಂಕ: 05.04.2017

ಮಾನ್ಯರೆ,

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ಮೂವತ್ತೇಳನೆಯ** ಸಭೆಯು ದಿನಾಂಕ: **05.04.2017ರ ಶನಿವಾರ ಬೆಳಿಗ್ಗೆ 11.30 ಗಂಟೆಗೆ** ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್ ಕಾರ್ಯಾಲಯದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳು ವಹಿಸಿದ್ದರು. ಈ ಪತ್ರದೊಂದಿಗೆ ಆ ದಿನ ನಡೆದ ಸಭೆಯ ನಡಾವಳಿಯನ್ನು ತಮ್ಮ ಅವಗಾಹನೆಗೆ ಕಳುಹಿಸಿಕೊಡಲಾಗಿದೆ.

ಈ ಸಭೆಯ ನಡಾವಳಿಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪತ್ರ ತಲುಪಿದ ದಿನಾಂಕದಿಂದ ಹತ್ತು ದಿನಗಳೊಳಗಾಗಿ ಸಲ್ಲಿಸಲು ಕೋರಲಾಗಿದೆ.

ವಂದನೆಗಳೊಂದಿಗೆ,

Sd/-
**ಕುಲಸಚಿವರು**

ಇವರಿಗೆ,

1. **ಪ್ರೊ. ಕೆ.ಈ. ರಾಧಾಕೃಷ್ಣ,** # 6, ಆರ್.ಐ.ಇ.ಎಚ್.ಎಸ್. ಲೇಔಟ್, ಜೆ.ಸಿ. ನಗರ, ಮಹಾಲಕ್ಷ್ಮೀಪುರಂ, ಬೆಂಗಳೂರು – 560086.
2. **ಡಾ. ವನಿತಾ ರಾಮಸ್ವಾಮಿ,** ಎ–002, ಆದರ್ಶ ರೆಸಿಡೆನ್ಸಿ, 47ನೇ ಅಡ್ಡರಸ್ತೆ, 8ನೇ ಬ್ಲಾಕ್, ಜಯನಗರ, ಬೆಂಗಳೂರು– 560070
3. **ವಿದ್ವಾನ್ ಕೆ. ಭೀಮಪ್ಪ,** ನಂ. 26, ಅಂಬೇಡ್ಕರ್ ಕಲ್ಯಾಣ ಮಂಟಪದ ಹತ್ತಿರ, ರಾಜೇಂದ್ರ ನಗರ, ಚಿತ್ರದುರ್ಗ ಜಿಲ್ಲೆ.
4. **ಶ್ರೀ ಪರಪ್ಪ ಬಸಪ್ಪ ಬಾವಲತ್ತಿ,** ರಾಮಪುರ, ರಬಕವಿ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
5. **ಪ್ರೊ. ಮೈಕೆಲ್,** ಸಂಸ್ಕೃತ ಪ್ರಾಧ್ಯಾಪಕರು, ಗುಲ್ಬರ್ಗಾ ವಿಶ್ವವಿದ್ಯಾಲಯ, ಜ್ಞಾನಗಂಗಾ, ಕಲಬುರಗಿ–585106.
6. **ಶ್ರೀಮತಿ ಜಯಶ್ರೀ ವಿ. ಕೊರತಿ,** ಕೆನರಾ ವೆಲ್‌ಫೇರ್ ಟ್ರಸ್ಟ್ ಎಜುಕೇಷನ್ ಕಾಲೇಜು, ದಾಂಡೇಲಿ, ಉತ್ತರ ಕನ್ನಡ ಜಿಲ್ಲೆ – 581325
7. **ವಿದ್ವಾನ್ ಸಿದ್ಧಮಲ್ಲ ಸ್ವಾಮಿ,** ನಂ. 136/1, ಶ್ರೀ ನೀಲಕಂಠಸ್ವಾಮಿ ಮಠ, ಹರಿಶ್ಚಂದ್ರ ರಸ್ತೆ, ಖಿಲ್ಲೆ ಮೊಹಲ್ಲಾ, ಮೈಸೂರು–570009
8. **ಶ್ರೀ ಗಜಾನನ ಲಕ್ಷ್ಮೀನಾರಾಯಣ ಭಟ್ಟ,** ಉಮ್ಮಚಗಿ, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ – 581347
9. **ಡಾ. ಕೆ. ಸುಧಾಕರ್,** ನಂ. 346/347, 'ಪ್ರೇಮವಿಲ್ಲಾ', 14ನೇ ಮುಖ್ಯರಸ್ತೆ, ಆರ್.ಎಂ.ವಿ. ಬಡಾವಣೆ, ಸದಾಶಿವನಗರ, ಬೆಂಗಳೂರು – 560080.
10. **ಕ್ಯಾಪ್ಟನ್ ಗಣೇಶ್ ಕಾರ್ಣಿಕ್,** ಹೆಚ್‌ಎ–41, ಹಿಸ್‌ಗ್ರೇಸ್, ಬ್ಯಾರೀಸ್ ಅಪಾರ್ಟ್‌ಮೆಂಟ್ಸ್, ಮಾರ್ಟಿನ್ ಪಾಯಸ್ ರಸ್ತೆ, ಹ್ಯಾಟ್ ಹಿಲ್, ಮಂಗಳೂರು–575006
11. **ಅಪರ ಮುಖ್ಯ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು–560001
12. **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ವಿಧಾನಸೌಧ, ಬೆಂಗಳೂರು–560001
13. **ಸರ್ಕಾರದ ಕಾರ್ಯದರ್ಶಿ,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ) ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು–560001
14. **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಪ್ರಸನ್ನಕುಮಾರ್ ಬ್ಲಾಕ್, ಅರಮನೆ ರಸ್ತೆ, ಬೆಂಗಳೂರು–09,
15. **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು–570001.
16. **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560002.
17. **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001
18. **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ ಬೆಂಗಳೂರು–560001
19. **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, 18 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012
20. **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009
21. **ಆಯುಕ್ತರು,** ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001

**ಪ್ರತಿಗಳು:**

1. **ಘನತೆವೆತ್ತ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು,** ರಾಜಭವನ, ಬೆಂಗಳೂರು – 560001
2. **ಮಾನ್ಯ ಕುಲಪತಿಯವರ ಆಪ್ತಶಾಖೆ,** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
3. ಕಛೇರಿ ಪ್ರತಿ 4. ರಕ್ಷತಾ ಪ್ರತಿ 5. ಜಾಲತಾಣಕ್ಕೆ ಅಳವಡಿಸಲು – ತುರ್ತು

ದೂರವಾಣಿ: 080 – 26701303 / 26705387; ಇ–ಮೇಲ್: karnatakasanskrituniversity@gmail.com
दूरवाणी: ०८०–२६७०१३०३; २६७०५३८७; ई-सङ्केतः – karnatakasanskrituniversity@gmail.com

ರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - 560018.

कर्नाटक-संस्कृत-विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु - ५६००१८.

## ೧೧.೦೪.೨೦೧೭ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) ೩೭ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ೩೭ನೇ ಸಭೆಯು** ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಏಪ್ರಿಲ್ ೧೧, ೨೦೧೭ರ ಶನಿವಾರ ಬೆಳಿಗ್ಗೆ ೧೧.೩೦** ಗಂಟೆಗೆ ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಪದ್ಮಾಶೇಖರ್,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಪ್ರೊ. ಕೆ.ಈ. ರಾಧಾಕೃಷ್ಣ,** ಶಿಕ್ಷಣತಜ್ಞರು, ಬೆಂಗಳೂರು | ಸದಸ್ಯರು |
| ೩. | **ಡಾ. ವನಿತಾ ರಾಮಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಬೆಂಗಳೂರು | ಸದಸ್ಯರು |
| ೪. | **ಶ್ರೀ ಕೆ. ಭೀಮಪ್ಪ,** ನಿವೃತ್ತ ಶಿಕ್ಷಣಾಧಿಕಾರಿಗಳು, ಚಿತ್ರದುರ್ಗ | ಸದಸ್ಯರು |
| ೫. | **ಶ್ರೀ ಪರಪ್ಪ ಬಸಪ್ಪ ಬಾವಲತ್ತಿ,** ನಿವೃತ್ತ ಅಧ್ಯಾಪಕರು, ರಾಮಪುರ, ರಬಕವಿ | ಸದಸ್ಯರು |
| ೬. | **ಡಾ. ಮೈಕೆಲ್,** ಪ್ರಾಧ್ಯಾಪಕರು ಮತ್ತು ಡೀನ್, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ಸದಸ್ಯರು |
| ೭. | **ಶ್ರೀಮತಿ ಜಯಶ್ರೀ ವಿ. ಕೊರತಿ,** ಪ್ರಾಚಾರ್ಯರು, ದಾಂಡೇಲಿ | ಸದಸ್ಯರು |
| ೮. | ವಿದ್ವಾನ್ ಸಿದ್ಧಮಲ್ಲ **ಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಮೈಸೂರು | ಸದಸ್ಯರು |
| ೯. | **ಶ್ರೀಮತಿ ಎಂ. ಶಿಲ್ಪ,** ಕುಲಸಚಿವರು -ಇವರ ಪರವಾಗಿ **ವಿದ್ವಾನ್ ಪಿ.ಆರ್. ಪಾಗೋಜಿ,** ಉಪಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | ವಿದ್ವಾನ್ **ಗಜಾನನ ಲಕ್ಷ್ಮೀನಾರಾಯಣ ಭಟ್ಟ,** ನಿವೃತ್ತ ಪ್ರಾಚಾರ್ಯರು, ಉಮ್ಮಚಗಿ | ಸದಸ್ಯರು |
| ೨. | **ಡಾ. ಕೆ. ಸುಧಾಕರ್,** ಶಾಸಕರು(ಚಿಕ್ಕಬಳ್ಳಾಪುರ), ಬೆಂಗಳೂರು | ಸದಸ್ಯರು |
| ೩. | **ಕ್ಯಾಪ್ಟನ್ ಗಣೇಶ್ ಕಾರ್ಣಿಕ್,** ಮಾನ್ಯ ವಿಧಾನಪರಿಷತ್ ಸದಸ್ಯರು, ಬೆಂಗಳೂರು | ಸದಸ್ಯರು |
| ೪. | **ಅಪರ ಮುಖ್ಯ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೫. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೭. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ-ನೈಋತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು-09 | ಸದಸ್ಯರು |
| ೮. | ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೯. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೧೦. | **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು-560001 | ಸದಸ್ಯರು |
| ೧೧. | **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು-560001 | ಸದಸ್ಯರು |
| ೧೨. | **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಬೆಂಗಳೂರು-560012 | ಸದಸ್ಯರು |
| ೧೩. | **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು-560009 | ಸದಸ್ಯರು |
| ೧೪. | **ನಿರ್ದೇಶಕರು,** ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001 | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಂಡಿತವಾಗಿ ನಿರ್ಣಯಗೊಂಡವು.

| | | |
|---|---|---|
| ವಿಷಯ **01** | ವಿಷಯ ಮತ್ತು ಟಿಪ್ಪಣಿ | **ಪ್ರಶಾಸನ ಸಮಿತಿ 35ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 35ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 28.12.2016ರಂದು ನಡೆಯಿತು. ಸಭೆಯ ನಿರ್ಣಯದಂತೆ ಕೈಗೊಳ್ಳಲಾದ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಭೆಯು ಪ್ರಶಾಸನ ಸಮಿತಿ 34ನೇ ಸಭೆಯ ಅನುಪಾಲನಾ ವರದಿಯನ್ನು ಪರಿಶೀಲಿಸಿ, ಅನುಮೋದನೆಯನ್ನು ನೀಡಿತು.** |

| | | |
|---|---|---|
| ವಿಷಯ 02 | ವಿಷಯ ಮತ್ತು ಟಿಪ್ಪಣಿ | 'ಪ್ರಶಿಕ್ಷಣ ಪರಿಷತ್ತಿ'ನ 20ನೇ ಸಭೆಯ ನಡಾವಳಿಗಳನ್ನು ಅನುಮೋದಿಸುವ ಬಗೆಗೆ.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಪ್ರಶಿಕ್ಷಣ ಪರಿಷತ್ತಿ'ನ 20ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 18.03.2017ರಂದು ನಡೆಯಿತು. ಆ ಸಭೆಯ ನಡಾವಳಿಗಳನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಭೆಯು 'ಪ್ರಶಿಕ್ಷಣ ಪರಿಷತ್ತಿ'ನ 20ನೇ ಸಭೆಯ ನಡಾವಳಿಗಳನ್ನು ಪರಿಶೀಲಿಸಿ, ಅನುಮೋದನೆಯನ್ನು ನೀಡಿತು.** |
| ವಿಷಯ 03 | ವಿಷಯ ಮತ್ತು ಟಿಪ್ಪಣಿ | **'ಹಣಕಾಸು ಸಮಿತಿ' 24ನೇ ಸಭೆಯ ನಡಾವಳಿಗಳನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಹಣಕಾಸು ಸಮಿತಿ' 24ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 28.02.2017ರಂದು ನಡೆಯಿತು. ಈ ಸಭೆಯ ನಡಾವಳಿಗಳನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಭೆಯು 'ಹಣಕಾಸು ಸಮಿತಿ' 23ನೇ ಸಭೆಯ ನಡಾವಳಿಗಳನ್ನು ಪರಿಶೀಲಿಸಿ, ಅನುಮೋದನೆಯನ್ನು ನೀಡಿತು.** |
| ವಿಷಯ 04 | ವಿಷಯ ಮತ್ತು ಟಿಪ್ಪಣಿ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳನ್ನು ವಿಭಾಗಗಳಿಗೆ ಸ್ಥಿರೀಕರಣಗೊಳಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಕರ್ನಾಟಕ ಸರ್ಕಾರವು ಆದೇಶ ಸಂಖ್ಯೆ: ಇಡಿ 91 ಯುಆರ್‌ಸಿ 2010; ದಿನಾಂಕ: 25.01.2011ರಲ್ಲಿ ಯುಜಿಸಿ ವೇತನಶ್ರೇಣಿಯ 45 ಬೋಧಕ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ಮಂಜೂರಾತಿ ನೀಡಿತ್ತು. ಆ ಮೇರೆಗೆ ವಿಶ್ವವಿದ್ಯಾಲಯವು ಅಧಿಸೂಚನೆ (ಸಂಖ್ಯೆ: KSU: UGC-PS.1/Prof./2012-13; Dated 01.01.2013) ಹೊರಡಿಸಿ, ಪ್ರಾಧ್ಯಾಪಕ–02 ಹುದ್ದೆಗಳನ್ನು ನೇಮಕ ಮಾಡಿಕೊಂಡಿತು ಹಾಗೂ ಅಧಿಸೂಚನೆ (ಸಂಖ್ಯೆ: KSU: UGC-PS/Teaching-Non Teaching Apmnt./2013-14; Dated 30.05.2013 ಮತ್ತು KSU: UGC-PS/Teaching-Non Teaching Apmnt./ 2014-15; Dated 05.11.2014)ಗಳನ್ನು ಹೊರಡಿಸಿ ಸಹ ಪ್ರಾಧ್ಯಾಪಕ ಮತ್ತು ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಭಾಷಾ ನಿಕಾಯ, ಶಾಸ್ತ್ರ ನಿಕಾಯ ಮತ್ತು ವೇದಾಂತ ನಿಕಾಯಗಳಿಗೆ ನೇಮಕ ಮಾಡಿಕೊಳ್ಳಲಾಯಿತು. ಒಟ್ಟು 17 ಜನರಲ್ಲಿ ಪ್ರಾಧ್ಯಾಪಕರು (02), ಸಹಪ್ರಾಧ್ಯಾಪಕರು (04) ಮತ್ತು ಸಹಾಯಕ ಪ್ರಾಧ್ಯಾಪಕರು (11) ಹುದ್ದೆಗಳನ್ನು ಈವರೆಗೂ ನೇಮಕ ಮಾಡಿಕೊಳ್ಳಲಾಗಿದೆ.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ವಿಶ್ವವಿದ್ಯಾಲಯ ಅನುದಾನ ಆಯೋಗ(ಯುಜಿಸಿ)ದಿಂದ '12ಬಿ' ಮಾನ್ಯತೆಯನ್ನು ಪಡೆಯಬೇಕಾದರೆ, ಐದು ವಿಭಾಗಗಳಿರುವುದು ಕಡ್ಡಾಯ. ಇರುವ ಮೂರು ನಿಕಾಯಗಳಡಿಯಲ್ಲಿ ಕ್ರಮವಾಗಿ ಭಾಷಾ ನಿಕಾಯದ ಅಡಿಯಲ್ಲಿ ಸಂಸ್ಕೃತ ಭಾಷೆ ಮತ್ತು ಸಾಹಿತ್ಯ, ಹಸ್ತಪ್ರತಿಶಾಸ್ತ್ರ; ಶಾಸ್ತ್ರ ನಿಕಾಯಕ ಅಡಿಯಲ್ಲಿ ನ್ಯಾಯ ಮತ್ತು ವೈಶೇಷಿಕ ವಿಭಾಗ ಮತ್ತು ಅಲಂಕಾರಶಾಸ್ತ್ರ; ವೇದಾಂತ ನಿಕಾಯದ ಅಡಿಯಲ್ಲಿ ವೇದಾಂತ ವಿಭಾಗಗಳನ್ನು ತೆರೆಯಲಾಗಿದೆ. ಹೀಗಾಗಿ, ಸದರಿ ಇರುವ 17 ಜನ ಬೋಧಕ ಸಿಬ್ಬಂದಿಗಳನ್ನು ಅವರು ಪಡೆದ ವಿದ್ಯಾರ್ಹತೆ, ಶೈಕ್ಷಣಿಕ ಅನುಭವ ಮತ್ತು ಸಂಶೋಧನೆಗೆ ಅನುಗುಣವಾಗಿ ವಿಭಾಗವಾರು ಮೂರು ನಿಕಾಯಗಳ ಅಡಿಯಲ್ಲಿ ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ವಿಭಾಗ, ನ್ಯಾಯ ಮತ್ತು ವೈಶೇಷಿಕ ವಿಭಾಗ, ವೇದಾಂತ ವಿಭಾಗಗಳಲ್ಲಿ ತಾತ್ಕಾಲಿಕವಾಗಿ ಸ್ಥಿರೀಕರಣಗೊಳಿಸಬೇಕಾಗಿದೆ. ಇದಕ್ಕೆ ಪ್ರಶಿಕ್ಷಣ ಸಮಿತಿಯು ಅನುಮತಿ ನೀಡಿದೆ ಎಂಬುದನ್ನು ತಮ್ಮಗಳ ಗಮನಕ್ಕೆ ತರುತ್ತಾ, ಹೆಚ್ಚಿನ ವಿಭಾಗಗಳು ತೆರೆದಾಗ ಮರು ಸ್ಥಿರೀಕರಣಕ್ಕೆ ಅವಕಾಶ ಕಲ್ಪಿಸಿಕೊಂಡು ವಿಭಾಗವಾರು ಕೆಳಗಿನಂತೆ ತಾತ್ಕಾಲಿಕವಾಗಿ ಸ್ಥಿರೀಕರಣಗೊಳಿಸಲು ಸಭೆಯ ಅನುಮೋದನೆಗಾಗಿ ಪಟ್ಟಿಯನ್ನು ಮಂಡಿಸಿದೆ. |
| | ನಿರ್ಣಯ | **ಬೋಧಕ ಸಿಬ್ಬಂದಿಗಳನ್ನು ವಿಭಾಗವಾರು ತಾತ್ಕಾಲಿಕವಾಗಿ ಸ್ಥಿರೀಕರಣಗೊಳಿಸಿರುವುದಕ್ಕೆ ಸಭೆಯು ಅನುಮೋದನೆಯನ್ನು ನೀಡಿತು.** |
| ವಿಷಯ 05 | ವಿಷಯ ಮತ್ತು ಟಿಪ್ಪಣಿ | **'ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ ಪರಿನಿಯಮ' ಅನುಮೋದನೆ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆ ಆದಾಗ ಅನುದಾನಸಹಿತ ಮತ್ತು ಅನುದಾನರಹಿತ ಸಂಸ್ಕೃತ ಪಾಠಶಾಲೆಗಳನ್ನು ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಲಾಗಿತ್ತು. ವಿಶ್ವವಿದ್ಯಾಲಯವು ಕರಡು ಪರಿನಿಯಮವನ್ನು ರೂಪಿಸಿ, ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಿತ್ತು. ಕರಡು ಪರಿನಿಯಮದಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಲು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿತ್ತು. ಈ ಸಮಿತಿಯು |

| | | |
|---|---|---|
| | | ರೂಪಿಸಿದ ಪರಿನಿಯಮವನ್ನು ಮತ್ತೊಮ್ಮೆ ಪರಿಶೀಲಿಸಿ, ಪ್ರಶಾಸನ ಸಮಿತಿಯ ಒಪ್ಪಿಗೆಗೆ ಮಂಡಿಸಿದೆ. |
| | ನಿರ್ಣಯ | **ಸಭೆಯು 'ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ ಪರಿನಿಯಮ'ವನ್ನು ಸಮಗ್ರವಾಗಿ ಪರಿಶೀಲಿಸಿ ಒಪ್ಪಿಗೆಯನ್ನು ನೀಡಿತು. ಪರಿನಿಯಮದಲ್ಲಿರುವ ಕೆಲವು ಮುದ್ರಣದೋಷ ಹಾಗೂ ಕ್ರಮಸಂಖ್ಯೆಗಳನ್ನು ಸರಿಪಡಿಸಿ, ನಿಯಮಾನುಸಾರ ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆಯನ್ನು ಪಡೆಯಲು ಸಭೆಯು ಸೂಚಿಸಿತು.** |
| ವಿಷಯ 06 | ವಿಷಯ ಮತ್ತು ಟಿಪ್ಪಣಿ | **ಶ್ರೀ ದಿವಾಕರ್ ಕೆ.ಬಿ., ವಾಹನ ಚಾಲಕರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ –ಇವರ ವಿರುದ್ಧದ 'ಆಂತರಿಕ ಇಲಾಖಾ ವಿಚಾರಣಾ ಸಮಿತಿ' ನೀಡಿರುವ ವರದಿಯ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಾಹನ ಚಾಲಕನಾದ ಕೆ.ಬಿ. ದಿವಾಕರ್ ಅವರು ವಿಶ್ವವಿದ್ಯಾಲಯದ ಕುಲಸಚಿವರ ಮೊಹರನ್ನು ಸ್ವಂತಕ್ಕೆ ಬಳಸಿ ಮೆ॥ ಅಂಜನಾದ್ರಿ ಎಂಟರ್‌ಪ್ರೈಸಸ್, ಬೆಂಗಳೂರು ಈ ಸಂಸ್ಥೆಗೆ ವಂಚಿಸಿರುವುದಕ್ಕೆ ಸಂಬಂಧಿಸಿದಂತೆ, ದಿನಾಂಕ: 16.03.2016ರಂದು ನಡೆದ ಪ್ರಶಾಸನ ಸಮಿತಿಯು, ವಾಹನ ಚಾಲಕನಾದ ಕೆ.ಬಿ. ದಿವಾಕರ್ ಅವರು ವಿಶ್ವವಿದ್ಯಾಲಯದ ಕುಲಸಚಿವರ ಮೊಹರನ್ನು ಸ್ವಂತಕ್ಕೆ ಬಳಸಿರುವುದು ಕ್ರಿಮಿನಲ್ ಅಪರಾಧವಾಗಿದ್ದು, ವಿಶ್ವವಿದ್ಯಾಲಯದ ಘನತೆಗೆ ಧಕ್ಕೆ ತಂದಿರುವ ಹಿನ್ನೆಲೆಯಲ್ಲಿ, ಅವರನ್ನು ಈ ಕೂಡಲೇ ಅಮಾನತ್ತುಗೊಳಿಸಿ, ಆಂತರಿಕ ವಿಚಾರಣೆಯನ್ನು ನಡೆಸುವಂತೆ ಹಾಗೂ ಸಮಿತಿಯು ನೀಡುವ ವರದಿಯ ಆಧಾರದ ಮೇಲೆ ಕ್ರಮವಹಿಸಬೇಕೆಂದು ಸೂಚಿಸಿತ್ತು. ಅದರಂತೆ, ವಿಚಾರಣೆಗಾಗಿ ವಿಶ್ವವಿದ್ಯಾಲಯವು ಪ್ರಶಾಸನ ಸಮಿತಿ ಸದಸ್ಯರಾದ ಪ್ರೊ. ಕೆ.ಈ. ರಾಧಾಕೃಷ್ಣ ಅವರ ಅಧ್ಯಕ್ಷತೆಯಲ್ಲಿ ಆಂತರಿಕ ವಿಚಾರಣಾ ಸಮಿತಿಯನ್ನು ರಚಿಸಿತ್ತು. ಈ ಸಮಿತಿಯು ವಾಹನ ಚಾಲಕರಾದ ದಿವಾಕರ್ ಅವರ ವಿರುದ್ಧದ ಆರೋಪದ ಬಗೆಗೆ ವಿಚಾರಣೆಯನ್ನು ನಡೆಸಿದ್ದು, ಅಂತಿಮ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದೆ. ಮುಂದಿನ ನಿರ್ಣಯ ಕೈಗೊಳ್ಳಲು ಸಮಿತಿಯು ನೀಡಿರುವ ವರದಿಯನ್ನು ಪ್ರಶಾಸನ ಸಮಿತಿ ಸಭೆಗೆ ಮಂಡಿಸಲಾಗಿದೆ. |
| | ನಿರ್ಣಯ | **ಸಭೆಯು 'ಆಂತರಿಕ ಇಲಾಖಾ ವಿಚಾರಣಾ ಸಮಿತಿ'ಯು ನೀಡಿರುವ ವರದಿಯನ್ನು ಪರಿಶೀಲಿಸಿ, ಸಮಿತಿಯು ಮಾಡಿರುವ ಶಿಫಾರಸ್ಸನ್ನು ಕುರಿತು ವಿಸ್ತೃತವಾಗಿ ಚರ್ಚಿಸಿತು. ಅಂತಿಮವಾಗಿ, ಶ್ರೀ ದಿವಾಕರ ಕೆ.ಬಿ., ವಾಹನ ಚಾಲಕರು – ಇವರಿಗೆ ಸಂಚಿತ ಪರಿಣಾಮ ಸಹಿತ(with cumulative effect)ದ ಒಂದು ವೇತನಬಡ್ತಿಯನ್ನು ತಡೆಹಿಡಿಯಲು ಸಭೆಯು ತೀರ್ಮಾನಿಸಿತು.** |
| ವಿಷಯ 07 | ವಿಷಯ ಮತ್ತು ಟಿಪ್ಪಣಿ | **ಸ್ನಾತಕಪೂರ್ವ ದೀಕ್ಷಾಂತ ಸಮಾರೋಹ ಕಾರ್ಯಕ್ರಮಕ್ಕೆ ತಗುಲಿದ ವೆಚ್ಚವನ್ನು ಅನುಮೋದಿಸುವ ಬಗೆಗೆ.**<br>ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ 'ಸ್ನಾತಕಪೂರ್ವ ದೀಕ್ಷಾಂತ ಸಮಾರೋಹ' ಕಾರ್ಯಕ್ರಮವನ್ನು 'ಕುವೆಂಪು ಕಲಾಕ್ಷೇತ್ರ'ದಲ್ಲಿ ದಿನಾಂಕ: 27.10.2016ರಂದು ನಡೆಸಲಾಯಿತು. ಈ ಕಾರ್ಯಕ್ರಮವನ್ನು ನಡೆಸಲು ರೂ. 2,50,000/–ಗಳ ಅಂದಾಜು ಮೊತ್ತಕ್ಕೆ ದಿನಾಂಕ: 05.07.2016ರಂದು ನಡೆದ ಪ್ರಶಾಸನ ಸಮಿತಿ 33ನೇ ಸಭೆಯಲ್ಲಿ ಒಪ್ಪಿಗೆ ಪಡೆಯಲಾಗಿತ್ತು. ಸ್ನಾತಕಪೂರ್ವ ದೀಕ್ಷಾಂತ ಸಮಾರೋಹಕ್ಕೆ ಒಟ್ಟಾರೆ 1,31,592/– ರೂಪಾಯಿಗಳು ವೆಚ್ಚವಾಗಿದ್ದು, ಉಳಿದ ಮೊತ್ತವನ್ನು ವಿಶ್ವವಿದ್ಯಾಲಯಕ್ಕೆ ವಾಪಸ್ಸು ಮಾಡಿದ್ದು, ಕಡತ ಮುಕ್ತಾಯ ಮಾಡಿದ್ದು, ಅನುಮೋದನೆಗಾಗಿ ಪ್ರಶಾಸನ ಸಮಿತಿ ಸಭೆಗೆ ಮಂಡಿಸಿದೆ. |
| | ನಿರ್ಣಯ | **ಸಭೆಯು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ 'ಸ್ನಾತಕಪೂರ್ವ ದೀಕ್ಷಾಂತ ಸಮಾರೋಹ' ಕಾರ್ಯಕ್ರಮಕ್ಕೆ ತಗುಲಿದ ಒಟ್ಟು ವೆಚ್ಚ 1,31,592/– ರೂಪಾಯಿಗಳಿಗೆ ಅನುಮೋದನೆಯನ್ನು ನೀಡಿತು.** |
| ವಿಷಯ 08 | ವಿಷಯ ಮತ್ತು ಟಿಪ್ಪಣಿ | **2016–17ನೇ ಸಾಲಿನ ವಲಯ ಹಾಗೂ ರಾಜ್ಯಮಟ್ಟದ ವಿವಿಧ ಸ್ಪರ್ಧೆಗಳಿಗೆ ತಗುಲಿದ ವೆಚ್ಚವನ್ನು ಅನುಮೋದಿಸುವ ಬಗೆಗೆ.**<br>ರಾಜ್ಯದ ಅನುದಾನಿತ ಹಾಗೂ ಅನುದಾನರಹಿತ ಸಂಸ್ಕೃತ ಪಾಠಶಾಲೆಗಳ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು 2016–17ನೇ ಸಾಲಿನಲ್ಲಿ ವಲಯ ಹಾಗೂ ರಾಜ್ಯಮಟ್ಟದ ವಿವಿಧ ಸ್ಪರ್ಧೆಗಳನ್ನು ನಡೆಸಲು ಅಂದಾಜು ವೆಚ್ಚ 3,50,000 ರೂಪಾಯಿಗಳಿಗೆ ದಿನಾಂಕ: 20.10.2016ರಂದು ನಡೆದ ಪ್ರಶಾಸನ ಸಮಿತಿ 34ನೇ ಸಭೆಯಲ್ಲಿ ಒಪ್ಪಿಗೆ ಪಡೆಯಲಾಗಿತ್ತು. ಈ ಸ್ಪರ್ಧೆಗಳಿಗೆ ಒಟ್ಟಾರೆ 2,06,009/– ರೂಪಾಯಿಗಳು ವೆಚ್ಚವಾಗಿದ್ದು, ಉಳಿದ ಮೊತ್ತವನ್ನು ವಿಶ್ವವಿದ್ಯಾಲಯಕ್ಕೆ ವಾಪಸ್ಸು ಮಾಡಿದ್ದು, ಕಡತ ಮುಕ್ತಾಯ ಮಾಡಿದೆ. ಅನುಮೋದನೆಗಾಗಿ ಪ್ರಶಾಸನ ಸಮಿತಿ ಸಭೆಗೆ ಮಂಡಿಸಿದೆ. |
| | ನಿರ್ಣಯ | **ಸಭೆಯು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ನಡೆಸಿದ 2016–17ನೇ ಸಾಲಿನ ವಲಯ ಹಾಗೂ ರಾಜ್ಯಮಟ್ಟದ ವಿವಿಧ ಸ್ಪರ್ಧೆಗಳಿಗೆ ತಗುಲಿದ ಒಟ್ಟು ವೆಚ್ಚ 2,06,009/– ರೂಪಾಯಿಗಳಿಗೆ ಅನುಮೋದನೆಯನ್ನು ನೀಡಿತು.** |

| | | |
|---|---|---|
| ವಿಷಯ 09 | ವಿಷಯ ಮತ್ತು ಟಿಪ್ಪಣಿ | ಅನುದಾನರಹಿತ ಸಂಸ್ಕೃತ ಪಾಠಶಾಲೆಗಳಿಗೆ ಮಾನ್ಯತೆ ನೀಡಿರುವುದಕ್ಕೆ ಹಾಗೂ ಮಾನ್ಯತೆ ನವೀಕರಿಸಿರುವುದಕ್ಕೆ ಅನುಮೋದನೆ ನೀಡುವ ಬಗೆಗೆ.<br>ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅನುದಾನರಹಿತ ಸಂಸ್ಕೃತ ಪಾಠಶಾಲೆಗಳ ಆಡಳಿತ ಮಂಡಳಿಯವರು ಹೊಸದಾಗಿ ಮಾನ್ಯತೆ ಪಡೆಯಲು ಹಾಗೂ ಪಡೆದಿರುವ ಮಾನ್ಯತೆಯನ್ನು ನವೀಕರಿಸಲು ಪ್ರಸ್ತಾವನೆಗಳನ್ನು ಸಲ್ಲಿಸಿದ್ದವು. ಈ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಮಾನ್ಯತೆಯನ್ನು ನವೀಕರಿಸಲಾಗಿದೆ ಹಾಗೂ ಹೊಸದಾಗಿ ಮಾನ್ಯತೆಯನ್ನು ನೀಡಲಾಗಿದೆ. ಪ್ರಶಾಸನ ಸಮಿತಿ ಅನುಮೋದನೆಗಾಗಿ ಸಭೆಯಲ್ಲಿ ಮಂಡಿಸಿದೆ. |
| | ನಿರ್ಣಯ | **ಸಭೆಯು ವಿವರಗಳನ್ನು ಪರಿಶೀಲಿಸಿತು ಹಾಗೂ ಪಾಠಶಾಲೆಗಳಿಗೆ ಭೇಟಿ ನೀಡಿದ ತ್ರಿಸದಸ್ಯ ಸಮಿತಿಯ ಅಭಿಪ್ರಾಯ ಮತ್ತು ಶಿಫಾರಸ್ಸುಗಳನ್ನು ಒಳಗೊಂಡ ಸಂಪೂರ್ಣ ವಿವರಗಳೊಂದಿಗೆ ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಿತು.** |
| ವಿಷಯ 10 | ವಿಷಯ ಮತ್ತು ಟಿಪ್ಪಣಿ | **ಶ್ರೀ ಮಂಜುನಾಥ ಕೋಟಿ, ಕಾವಲುಗಾರ –ಇವರನ್ನು 'ಕಿರಿಯ ವಾಹನ ಚಾಲಕ' ಹುದ್ದೆಗೆ ಮೇಲ್ದರ್ಜೆಗೇರಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ನೇಮಕಾತಿ ಆದೇಶ ಸಂಖ್ಯೆ: ಕಸಂವಿ/23/ರಾ.ವೇ. ಬೋಧಕೇತರ ಹು./2012–13/575; ದಿನಾಂಕ: 10.12.2012ರ ಅನ್ವಯ ಶ್ರೀ ಮಂಜುನಾಥ ಕೋಟಿ –ಇವರು ವಿಶ್ವವಿದ್ಯಾಲಯದ ಕಾವಲುಗಾರ(ಗ್ರೂಪ್ ಡಿ) ಹುದ್ದೆಗೆ ನೇಮಕ ಹೊಂದಿದ್ದು, ಇವರು ದಿನಾಂಕ: 10.12.2012ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡು, ಅಂದಿನಿಂದ ಕಾವಲುಗಾರ(ಗ್ರೂಪ್ ಡಿ)ರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.<br>ವಿಶ್ವವಿದ್ಯಾಲಯದಲ್ಲಿ ಕುಲಪತಿಗಳು, ಕುಲಸಚಿವರು ಹಾಗೂ ಹಣಕಾಸು ಅಧಿಕಾರಿ –ಈ ಮೂರು ಶಾಸನಬದ್ಧ ಅಧಿಕಾರಿಗಳು ಇದ್ದು, ಕಛೇರಿ ಕಾರ್ಯಗಳ ನಿಮಿತ್ತ ಇವರ ಪ್ರಯಾಣಕ್ಕಾಗಿ ಮೂರು ಕಾರುಗಳು ಇವೆ. ಸರ್ಕಾರದ ಆದೇಶ ಸಂಖ್ಯೆ: ಇಡಿ 91 ಯುಆರ್‌ಸಿ 2010; ದಿನಾಂಕ: 25.01.2011ರಲ್ಲಿ ಮಂಜೂರಾಗಿರುವ ಒಟ್ಟು 133 ಬೋಧಕ–ಬೋಧಕೇತರ ಹುದ್ದೆಗಳಲ್ಲಿ ರಾಜ್ಯ ವೇತನಶ್ರೇಣಿಯ ವಾಹನ ಚಾಲಕ–02 ಹುದ್ದೆಗಳೂ ಸೇರಿವೆ. ಈ ಎರಡು ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊಳ್ಳಲಾಗಿದ್ದು, ಕುಲಪತಿಗಳು ಹಾಗೂ ಕುಲಸಚಿವರ ವಾಹನ ಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.<br>ವಿಶ್ವವಿದ್ಯಾಲಯಕ್ಕೆ ಹಣಕಾಸು ಅಧಿಕಾರಿಗಳ ನೇಮಕ ಆಗದ ಹಿನ್ನೆಲೆಯಲ್ಲಿ, ಉಪಕುಲಸಚಿವರಾಗಿ ನೇಮಕಗೊಂಡಿರುವ ವಿದ್ವಾನ್ ಪ್ರಕಾಶ್ ಆರ್. ಪಾಗೋಜಿ –ಇವರು ಹಣಕಾಸು ಅಧಿಕಾರಿಗಳ ಪ್ರಭಾರವನ್ನು ನಿರ್ವಹಿಸುತ್ತಿದ್ದಾರೆ. ಕಛೇರಿ ಕಾರ್ಯಗಳ ನಿಮಿತ್ತ ಸರ್ಕಾರಕ್ಕೆ ಹೋಗಿಬರಲು ಇವರಿಗೆ ತಮ್ಮ ಸ್ವಂತ ವಾಹನವನ್ನು ಬಳಸಲು ಅನುಮತಿ ನೀಡಲಾಗಿತ್ತು ಹಾಗೂ ಆನಂತರದಲ್ಲಿ, ಈ ಹಿಂದೆ ಕುಲಸಚಿವರು ಬಳಸುತ್ತಿದ್ದ ಕಾರನ್ನು ನೀಡಲಾಗಿದೆ. ಇವರಿಗೆ ವಾಹನ ಚಾಲಕರನ್ನು ನೇಮಕ ಮಾಡಿಕೊಂಡಿರುವುದಿಲ್ಲ. ಬದಲಾಗಿ, ಆದೇಶ ಸಂಖ್ಯೆ: ಕಸಂವಿ/ಹಅನೇ–01/2012–13/1; ದಿನಾಂಕ: 22.02.2014ರ ಅನ್ವಯ, ಶ್ರೀ ಮಂಜುನಾಥ ಕೋಟಿ, ಕಾವಲುಗಾರ –ಇವರಿಗೆ ಹೆಚ್ಚಿನ ಜವಾಬ್ದಾರಿಯಾಗಿ ಹಣಕಾಸು ಅಧಿಕಾರಿಗಳ ವಾಹನ ಚಾಲಕರಾಗಿ ಮತ್ತು ಹಣಕಾಸು ಶಾಖೆಯಲ್ಲಿ ಕೆಲಸ ನಿರ್ವಹಿಸಲು ಆದೇಶಿಸಿದ್ದು, ಅದರಂತೆ ಶ್ರೀ ಮಂಜುನಾಥ ಕೋಟಿ –ಇವರು ಕಾರ್ಯನಿರ್ವಹಿಸುತ್ತಿದ್ದಾರೆ.<br>ಶ್ರೀ ಮಂಜುನಾಥ ಕೋಟಿ, ಕಾವಲುಗಾರ –ಇವರು ರೂ. 9600–14550 ವೇತನಶ್ರೇಣಿಯಲ್ಲಿದ್ದು, ಪ್ರಸ್ತುತ ರೂ. 10400/– ಮೂಲವೇತನವನ್ನು ಪಡೆಯುತ್ತಿದ್ದಾರೆ. ವಾರ್ಷಿಕ ವೇತನಬಡ್ತಿ ದರ ರೂ. 200/– ಗಳಾಗಿದ್ದು, ಇನ್ನು 06 ವಾರ್ಷಿಕ ವೇತನ ಬಡ್ತಿಯನ್ನು ಸೇರಿಸಿದಾಗ ಇವರ ಮೂಲವೇತನ ರೂ. 11,600/– ಆಗಲಿದೆ.<br>ನಮ್ಮ ವಿಶ್ವವಿದ್ಯಾಲಯಕ್ಕೆ ಕೇವಲ 02 ವಾಹನ ಚಾಲಕ ಹುದ್ದೆಗಳು ಮಂಜೂರಾಗಿದ್ದು, ಇವುಗಳನ್ನು ಸರ್ಕಾರದ ಇತರೆ ಇಲಾಖೆಗಳಲ್ಲಿರುವಂತೆ (ಉದಾ: ರಾಜ್ಯಪಾಲರ ಸಚಿವಾಲಯ, ಶಾಸಕಾಂಗ ಸಚಿವಾಲಯ, ಕಾಲೇಜು ಶಿಕ್ಷಣ ಇಲಾಖೆ, ಪತ್ರಾಗಾರ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಇತ್ಯಾದಿ) ಹಿರಿಯ ವಾಹನ ಚಾಲಕ, ವಾಹನ ಚಾಲಕ ಎಂದು ವರ್ಗೀಕರಿಸಲಾಗಿಲ್ಲ. ಬದಲಿಗೆ, ಕೇವಲ ವಾಹನ ಚಾಲಕ ಎಂದಿದ್ದು, ರಾಜ್ಯಪಾಲರಿಂದ ಅನುಮೋದನೆಗೊಂಡ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ವೃಂದ ಮತ್ತು ನೇಮಕಾತಿ ಪರಿನಿಯಮದ ಅನ್ವಯ ಇವರ ವೇತನಶ್ರೇಣಿಯು ರೂ. 12500–24000 ಆಗಿದೆ.<br>ಸರ್ಕಾರದ ಇತರೆ ಇಲಾಖೆಗಳಲ್ಲಿರುವ ವಾಹನ ಚಾಲಕ ಹುದ್ದೆಯ ವೇತನಶ್ರೇಣಿಯು ರೂ. 11,600–21000 ಆಗಿದೆ. ಅದರಂತೆ, ಪ್ರಸ್ತುತ ಹೆಚ್ಚುವರಿಯಾಗಿ ವಾಹನ ಚಾಲಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಮಂಜುನಾಥ ಕೋಟಿ –ಇವರಿಗೆ ಹೆಚ್ಚುವರಿಯಾಗಿ 06 ವಾರ್ಷಿಕ ವೇತನ ಬಡ್ತಿಯನ್ನು ನೀಡಿ, |

| | | |
|---|---|---|
| | | ಇವರನ್ನು 'ಕಿರಿಯ ವಾಹನ ಚಾಲಕ' ಹುದ್ದೆಗೆ ಮೇಲ್ದರ್ಜೆಗೆ ಏರಿಸಬಹುದಾಗಿದೆ. ಇದರಿಂದ ವಿಶ್ವವಿದ್ಯಾಲಯಕ್ಕೆ ಹೊಸದಾಗಿ ವಾಹನ ಚಾಲಕ(ವೇತನಶ್ರೇಣಿ 12500-24000)ರನ್ನು ನೇಮಿಸುವಾಗ ಉಂಟಾಗುವಂತೆ, ಹೆಚ್ಚಿನ ಆರ್ಥಿಕ ಹೊರೆ ಉಂಟಾಗುವುದಿಲ್ಲ. ಇವರು ವಾಹನ ಚಾಲಕ ಹುದ್ದೆಗೆ ಅಗತ್ಯವಾದ ಚಾಲನಾ ಪರವಾನಗಿಯನ್ನು ಪಡೆದಿರುತ್ತಾರೆ.<br>ಮುಂದಿನ ನಿರ್ಣಯವನ್ನು ಕೈಗೊಳ್ಳಲು ಮೇಲಿನ ಎಲ್ಲಾ ಮಾಹಿತಿಗಳನ್ನು ಸೂಕ್ತ ದಾಖಲೆಗಳೊಂದಿಗೆ ಪ್ರಶಾಸನ ಸಮಿತಿ ಸಭೆಗೆ ಮಂಡಿಸಿದೆ. |
| | ನಿರ್ಣಯ | **ಸಭೆಯು ವಿವರಗಳನ್ನು ಪರಿಶೀಲಿಸಿ, ತಾತ್ವಿಕವಾಗಿ ಒಪ್ಪಿಗೆಯನ್ನು ನೀಡಿತು. ಆದರೆ, ಸರ್ಕಾರಿ ನಿಯಮಾನುಸಾರ ಕ್ರಮಕೈಗೊಳ್ಳುವಂತೆ ನಿರ್ದೇಶನ ನೀಡಿತು.** |
| ವಿಷಯ 11 | ವಿಷಯ ಮತ್ತು ಟಿಪ್ಪಣಿ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಯುಜಿಸಿ ಬೋಧಕ ಸಿಬ್ಬಂದಿಗಳ ಆಯ್ಕೆ ಸಮಿತಿ ರಚನೆಗೆ ವಿಷಯತಜ್ಞರ ಪಟ್ಟಿಯನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಯುಜಿಸಿ ಬೋಧಕ ಸಿಬ್ಬಂದಿಗಳ ಆಯ್ಕೆ ಸಮಿತಿ ರಚನೆಗಾಗಿ ಈ ಕೆಳಕಂಡ ವಿಷಯತಜ್ಞರ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಈ ವಿಷಯತಜ್ಞರ ಪಟ್ಟಿಯನ್ನು ಅನುಮೋದನೆಗಾಗಿ ಸಭೆಯ ಮುಂದಿಡಲಾಗಿದೆ. |
| | ನಿರ್ಣಯ | **ಸಭೆಯು ವಿಷಯತಜ್ಞರ ಪಟ್ಟಿಯನ್ನು ಪರಿಶೀಲಿಸಿ, ಒಪ್ಪಿಗೆಯನ್ನು ಸೂಚಿಸಿತು. ಜೊತೆಗೆ, ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದ ಡಾ. ಪ್ರಹ್ಲಾದ ಜೋಶಿ ಮತ್ತು ದೆಹಲಿಯ ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಬ್ಬರು ಅಧ್ಯಾಪಕರ ಹೆಸರನ್ನು ತಜ್ಞರಪಟ್ಟಿಯಲ್ಲಿ ಸೇರಿಸಿಕೊಳ್ಳುವಂತೆ ಸಭೆಯು ತಿಳಿಸಿತು.** |
| ವಿಷಯ 12 | ವಿಷಯ ಮತ್ತು ಟಿಪ್ಪಣಿ | **ಯುಜಿಸಿ ವೇತನಶ್ರೇಣಿಯ ಬೋಧಕ ಸಿಬ್ಬಂದಿಗಳ 'Career Advancement Scheme' (CAS) ಅಳವಡಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2013-14ನೇ ಸಾಲಿನಿಂದ ಯುಜಿಸಿ ವೇತನಶ್ರೇಣಿಯ ಬೋಧಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ನಡೆಸುತ್ತಿದೆ. ವಿಶ್ವವಿದ್ಯಾಲಯಕ್ಕೆ ನೇಮಕಗೊಳ್ಳುವ ಬೋಧಕ ಸಿಬ್ಬಂದಿಗಳಿಗೆ ಯುಜಿಸಿ ನಿಯಮಾನುಸಾರ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಮ್ (**CAS**)ಅನ್ನು ಅಳವಡಿಸಿಕೊಂಡು, ಚಾಲ್ತಿಗೆ ತರುವುದಕ್ಕೆ ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಅಡ್ವಾನ್ಸ್‌ಮೆಂಟ್ ಸ್ಕೀಮ್ (CAS)ಅನ್ನು ಅಳವಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ, ಮೈಸೂರು ವಿಶ್ವವಿದ್ಯಾನಿಲಯದ ಪರಿನಿಯಮವನ್ನು ಗಮನಿಸಿಕೊಂಡು, ಪ್ರತ್ಯೇಕವಾದ ಪರಿನಿಯಮವನ್ನು ರಚಿಸಿಕೊಳ್ಳುವಂತೆ ಸಭೆಯು ಸೂಚಿಸಿತು.** |
| ವಿಷಯ 13 | ವಿಷಯ ಮತ್ತು ಟಿಪ್ಪಣಿ | **ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ, ಸಹಪ್ರಾಧ್ಯಾಪಕರು ಮತ್ತು ಡಾ. ಬಿ.ವಿ. ವೆಂಕಟರಮಣ, ಸಹಪ್ರಾಧ್ಯಾಪಕರು -ಇವರ ಹಿಂದಿನ ಸೇವಾವಧಿಯನ್ನು ಪರಿಗಣಿಸುವ ಬಗೆಗೆ.**<br>ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ -ಇವರು ದಿನಾಂಕ: 05.03.2014ರಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ವೇದಾಂತ ನಿಕಾಯದ ಸಹಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದಕ್ಕೆ ಪೂರ್ವದಲ್ಲಿ, ದಿನಾಂಕ: 27.12.2006ರಿಂದ 04.03.2014ರ ವರೆಗೆ ಒಟ್ಟು 07 ವರ್ಷಗಳ ಕಾಲ ರಾಜಸ್ಥಾನದ ಜಗದ್ಗುರು ರಾಮಾನಂದಾಚಾರ್ಯ ರಾಜಸ್ಥಾನ ಸಂಸ್ಕೃತ ವಿಶ್ವವಿದ್ಯಾಲಯ -ಇಲ್ಲಿ ಸಹಪ್ರಾಧ್ಯಾಪಕ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ್ದಾರೆ. ಇವರ ಸಹಪ್ರಾಧ್ಯಾಪಕ ಹುದ್ದೆಯ ಸೇವಾವಧಿಯನ್ನು ಪರಿಗಣಿಸಲು ಅನುಮೋದನೆಗಾಗಿ ಸಲ್ಲಿಸಿದೆ.<br>ಡಾ. ಬಿ.ವಿ. ವೆಂಕಟರಮಣ -ಇವರು ದಿನಾಂಕ: 05.03.2014ರಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಶಾಸ್ತ್ರ ನಿಕಾಯದ ಸಹಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದಕ್ಕೆ ಪೂರ್ವದಲ್ಲಿ, ದಿನಾಂಕ: 03.02.2006ರಿಂದ 04.03.2014ರ ವರೆಗೆ ಒಟ್ಟು 08 ವರ್ಷಗಳ ಕಾಲ ರಾಜಸ್ಥಾನದ ಜಗದ್ಗುರು ರಾಮಾನಂದಾಚಾರ್ಯ ರಾಜಸ್ಥಾನ ಸಂಸ್ಕೃತ ವಿಶ್ವವಿದ್ಯಾಲಯ -ಇಲ್ಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ್ದಾರೆ. ಇವರ ಸಹಾಯಕ ಪ್ರಾಧ್ಯಾಪಕ ಹುದ್ದೆಯ ಸೇವಾವಧಿಯನ್ನು ಪರಿಗಣಿಸಲು ಅನುಮೋದನೆಗಾಗಿ ಸಲ್ಲಿಸಿದೆ. |
| | ನಿರ್ಣಯ | **ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ, ಸಹಪ್ರಾಧ್ಯಾಪಕರು, ವೇದಾಂತ ನಿಕಾಯ ಮತ್ತು ಡಾ. ಬಿ.ವಿ. ವೆಂಕಟರಮಣ, ಸಹಪ್ರಾಧ್ಯಾಪಕರು, ಶಾಸ್ತ್ರ ನಿಕಾಯ -ಇವರಿಬ್ಬರ ಸೇವಾವಿವರಗಳನ್ನು ದಾಖಲೆಗಳೊಂದಿಗೆ ಮುಂದಿನ ಸಭೆಯಲ್ಲಿ ಮಂಡಿಸಲು ಸಭೆಯು ನಿರ್ಣಯಿಸಿತು.** |

| | | |
|---|---|---|
| ವಿಷಯ 14 | ವಿಷಯ ಮತ್ತು ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಸಾರಾಂಗವನ್ನು ಸಂಸ್ಕೃತ ಸಂಶೋಧನ ಸಂಸತ್, ಮೇಲುಕೋಟೆ – ಇಲ್ಲಿಗೆ ಸ್ಥಳಾಂತರಿಸುವ ಬಗೆಗೆ.<br>ಸಂಸ್ಕೃತ ಸಂಶೋಧನ ಸಂಸತ್, ಮೇಲುಕೋಟೆ –ಈ ಸಂಸ್ಥೆಯನ್ನು ವಿಶ್ವವಿದ್ಯಾಲಯದ ಅಧೀನಕ್ಕೆ ಒಳಪಡಿಸಿರುವುದು ಸರಿಯಷ್ಟೆ. ಈ ಸಂಸ್ಥೆಯಲ್ಲಿರುವ ಪ್ರಾಚೀನ ತಾಳೆಗರಿಗಳ ಸಂಶೋಧನೆ, ಪ್ರಕಟಣೆ, ಇನ್ನಿತರ ಪ್ರಸಾರಾಂಗದ ಚಟುವಟಿಕೆಗಳನ್ನು ಸುಸೂತ್ರವಾಗಿ ನಡೆಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಪ್ರಸಾರಾಂಗವನ್ನು ಸಿಬ್ಬಂದಿಯ ಸಮೇತ ಸಂಸ್ಕೃತ ಸಂಶೋಧನ ಸಂಸತ್‌ಗೆ ಸ್ಥಳಾಂತರಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ. |
| | ನಿರ್ಣಯ | **ಪ್ರಸಾರಾಂಗ ವ್ಯವಸ್ಥೆಯನ್ನು ಸಂಸ್ಕೃತ ವಿಶ್ವವಿದ್ಯಾಲಯದಲ್ಲೇ ಉಳಿಸಿಕೊಂಡು, ಭಗವದ್ರಾಮಾನುಜಾಚಾರ್ಯರ ಸಹಸ್ರಮಾನೋತ್ಸವದ ಅಂಗವಾಗಿ ತಾತ್ಕಾಲಿಕವಾಗಿ ಇಲ್ಲಿಯ ಪ್ರಸಾರಾಂಗದ ಸಿಬ್ಬಂದಿಯನ್ನು ಮೇಲುಕೋಟೆಗೆ ನಿಯೋಜಿಸಲು ಸಭೆ ಒಪ್ಪಿಗೆ ಸೂಚಿಸಿತು.** |
| ವಿಷಯ 15 | ವಿಷಯ ಮತ್ತು ಟಿಪ್ಪಣಿ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಯೋಜನಾ ಸಹಾಯಕರು (ಶೈಕ್ಷಣಿಕ)' ಸಿಬ್ಬಂದಿಗಳನ್ನು ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ನ ಸಂಶೋಧನಕಾರ್ಯಕ್ಕೆ ನಿಯೋಜಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ರಾಜ್ಯ ವೇತನಶ್ರೇಣಿಯ 'ಯೋಜನಾ ಸಹಾಯಕರು (ಶೈಕ್ಷಣಿಕ)'– 26 ಹುದ್ದೆಗಳು ಸರ್ಕಾರದಿಂದ ಮಂಜೂರಾಗಿದ್ದು, ಮೊದಲ ಹಂತದಲ್ಲಿ ಹತ್ತು(10) ಹುದ್ದೆಗಳನ್ನು ನೇಮಕಾತಿ ಮಾಡಿಕೊಂಡಿದೆ. ಪ್ರಸ್ತುತ, ಎರಡನೇ ಹಂತದಲ್ಲಿ ಎಂಟು(08) ಹುದ್ದೆಗಳ ನೇಮಕಾತಿಗೆ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ಅನ್ನು ಸರ್ಕಾರವು ವಿಶ್ವವಿದ್ಯಾಲಯದ ಅಧೀನಕ್ಕೆ ಒಳಪಡಿಸಿದ್ದು, ಈ ಸಂಸ್ಥೆಯ ಸಂಪೂರ್ಣ ಆಡಳಿತವು ವಿಶ್ವವಿದ್ಯಾಲಯದ್ದಾಗಿದೆ. ಇಲ್ಲಿ ಸಂಶೋಧನ ಕಾರ್ಯಗಳು ನಿಯಮಿತವಾಗಿ ನಡೆಯುತ್ತಿದ್ದು, ಈ ಸಂಸ್ಥೆಯಲ್ಲಿ ಅನೇಕ ಅಪರೂಪದ ಪ್ರಾಚೀನ ತಾಳೆಗರಿಗಳ ದೊಡ್ಡ ಸಂಗ್ರಹವೇ ಇವೆ. ಸಂಶೋಧನೆಗೆ ಸುಮಾರು ವರ್ಷಗಳ ಕಾಲ ತಂಡೋಪತಂಡವಾಗಿ ಸಂಶೋಧನೆ ನಡೆಸಿದರೂ ಮುಗಿಯದಷ್ಟು ತಾಳೆಗರಿಗಳ ಸಂಗ್ರಹವಿದೆ. ಇವುಗಳ ಸಂಶೋಧನೆ ಮತ್ತು ಪ್ರಕಟಣೆಯ ದೃಷ್ಟಿಯಿಂದ ವಿಶ್ವವಿದ್ಯಾಲಯದ ಕೆಲವು ಯೋಜನಾ ಸಹಾಯಕರು (ಶೈಕ್ಷಣಿಕ) ಸಿಬ್ಬಂದಿಯನ್ನು ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ಗೆ ನಿಯೋಜಿಸಬಹುದಾಗಿದೆ. ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ. |
| | ನಿರ್ಣಯ | **ಪ್ರತಿಯೊಬ್ಬ ಯೋಜನಾ ಸಹಾಯಕರ ಅರ್ಹತೆ, ಅಧ್ಯಯನದ ವಿವರ, ಆಸಕ್ತಿಯ ಕ್ಷೇತ್ರ, ಮೊದಲಾದ ಸಂಪೂರ್ಣವಾದ ಸ್ವವಿವರಗಳನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸಭೆಯು ಸೂಚಿಸಿತು.** |
| ವಿಷಯ 16 | ವಿಷಯ ಮತ್ತು ಟಿಪ್ಪಣಿ | **ಪ್ರಸ್ತುತ ಇರುವ ಕಟ್ಟಡದಲ್ಲಿ ಮೇಲಿನ ಅಂತಸ್ತನ್ನು ಕಟ್ಟಲು ಹಾಗೂ ಆಡಳಿತ ಕಚೇರಿಯನ್ನು ವಿಸ್ತರಿಸಲು ಸರ್ಕಾರಿ ಸಂಸ್ಥೆಗೆ ವಹಿಸುವ ಬಗೆಗೆ.**<br>ಈಗಾಗಲೇ ದಿನಾಂಕ: 16.03.2016ರ ಪ್ರಶಾಸನ ಸಮಿತಿ ಸಭೆಯಲ್ಲಿ 'ಕಟ್ಟಡ ಸಲಹಾ ಸಮಿತಿ'ಯನ್ನು ಪುನಾರಚಿಸಲಾಗಿದೆ. ಈ ಸಮಿತಿಯ ಅಭಿಪ್ರಾಯದಂತೆ, ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ಉಳಿತಾಯ ಹಣದಲ್ಲಿ ವಿಶ್ವವಿದ್ಯಾಲಯದ ಆಡಳಿತ ಕಚೇರಿಯ ಕಟ್ಟಡವನ್ನು ವಿಸ್ತರಣೆ ಮಾಡಲು ಹಾಗೂ ಮೇಲಿನ ಅಂತಸ್ತನ್ನು ನಿರ್ಮಿಸಲು ಸರ್ಕಾರಿ ಸಂಸ್ಥೆಗೆ ವಹಿಸಬಹುದಾಗಿದೆ. ಈ ವಿಷಯವನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಭೆಯು ಸರ್ವಾನುಮತದಿಂದ ಒಪ್ಪಿಗೆಯನ್ನು ಸೂಚಿಸಿತು.** |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | | |
| ವಿಷಯ 01 | ವಿಷಯ ಮತ್ತು ಟಿಪ್ಪಣಿ | **'ಸಂಸ್ಕೃತ ಗ್ರಂಥ ಪುರಸ್ಕಾರ–2015' ನೀಡುವ ಬಗೆಗೆ.**<br>ದಿನಾಂಕ: 28.12.2016ರಂದು ನಡೆದ ಪ್ರಶಾಸನ ಸಮಿತಿ 35ನೇ ಸಭೆಯ ನಿರ್ಣಯದಂತೆ, 'ಸಂಸ್ಕೃತ ಗ್ರಂಥ ಪುರಸ್ಕಾರ–2015'ಕ್ಕೆ ಗ್ರಂಥಗಳನ್ನು ಆಹ್ವಾನಿಸಲಾಗಿತ್ತು. ಅದರಂತೆ, ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾದ ಗ್ರಂಥಗಳನ್ನು ಪರಿಶೀಲಿಸಿ, ಆಯ್ಕೆ ಮಾಡಲು ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ದಿನಾಂಕ: 24.03.2017ರಂದು ಸಭೆ ಸೇರಿ, ಲೇಖಕರು ಸಲ್ಲಿಸಿರುವ ಗ್ರಂಥಗಳನ್ನು ಪರಿಶೀಲಿಸಿ, ವಿವಿಧ ಪ್ರಕಾರಗಳಿಗೆ ಸೇರಿದ ಎಂಟು ಗ್ರಂಥಗಳನ್ನು 'ಸಂಸ್ಕೃತ ಗ್ರಂಥ ಪುರಸ್ಕಾರ–2015'ಕ್ಕೆ ಆಯ್ಕೆ ಮಾಡಿದೆ. ಆಯ್ಕೆಯಾದ ಗ್ರಂಥಗಳ ಪಟ್ಟಿಯನ್ನು ಪ್ರಶಾಸನ ಸಮಿತಿಗೆ ಮಂಡಿಸಿದೆ ಹಾಗೂ 'ಸಂಸ್ಕೃತ ಗ್ರಂಥ ಪುರಸ್ಕಾರ–2015' ಪ್ರದಾನ ಸಮಾರಂಭವನ್ನು ನಡೆಸಲು ರೂ. 1,24,380/– ವೆಚ್ಚವಾಗಬಹುದೆಂದು ಅಂದಾಜಿಸಲಾಗಿದ್ದು, ಈ |

| | | |
|---|---|---|
| | | ಅಂದಾಜು ಮೊತ್ತಕ್ಕೆ ಅನುಮೋದನೆಗಾಗಿ ಪ್ರಶಾಸನ ಸಮಿತಿ ಸಭೆಗೆ ಮಂಡಿಸಿದೆ. |
| | ನಿರ್ಣಯ | **ಸಭೆಯು 'ಸಂಸ್ಕೃತ ಗ್ರಂಥ ಪುರಸ್ಕಾರ-2015'ಕ್ಕೆ ಆಯ್ಕೆಯಾಗಿರುವ ಗ್ರಂಥಗಳು ಹಾಗೂ ಲೇಖಕರ ವಿವರಗಳನ್ನು ಪರಿಶೀಲಿಸಿ, ಅನುಮೋದಿಸಿತು. ಸಂಸ್ಕೃತ ಗ್ರಂಥ ಪುರಸ್ಕಾರ ಪ್ರದಾನ ಸಮಾರಂಭವನ್ನು ನಡೆಸಲು ಅಂದಾಜಿಸಿದ ಮೊತ್ತ 1,24,380/- ರೂಪಾಯಿಗಳಿಗೆ ಒಪ್ಪಿಗೆಯನ್ನು ನೀಡಿತು.** |
| ವಿಷಯ 02 | ವಿಷಯ ಮತ್ತು ಟಿಪ್ಪಣಿ | **ಹೊಸದಾಗಿ ವಿದ್ಯಾರ್ಥಿನಿಲಯವನ್ನು ನಿರ್ಮಿಸುವುದರ ಬಗೆಗೆ.**<br>ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಹಿಂಭಾಗದಲ್ಲಿ ವಿದ್ಯಾರ್ಥಿನಿಲಯವಿದ್ದು, ಇಲ್ಲಿ ಕಾಲೇಜಿನ ಸುಮಾರು 35 ವಿದ್ಯಾರ್ಥಿಗಳು ವಾಸಿಸುತ್ತಿದ್ದಾರೆ. ಆದರೆ, ಒಳಚರಂಡಿ ವ್ಯವಸ್ಥೆ ಹದಗೆಟ್ಟಿದೆ. ಮಾತ್ರವಲ್ಲ, ಕೊಠಡಿಗಳ ಮೇಲ್ಚಾವಣಿ ಸೋರುತ್ತಿದ್ದು, ರಿಪೇರಿ ಮಾಡಿಸುವ ಸ್ಥಿತಿಯಲ್ಲಿ ಅವುಗಳು ಇಲ್ಲ. ಹೀಗಾಗಿ, ಅದೇ ಜಾಗದಲ್ಲಿ ಹೊಸದಾಗಿ ವಿದ್ಯಾರ್ಥಿನಿಲಯವನ್ನು ನಿರ್ಮಿಸಬಹುದಾಗಿದ್ದು, ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಭೆಯು ಒಪ್ಪಿಗೆ ನೀಡಿತು. ಜೊತೆಗೆ ಸಾಧ್ಯವಾದಷ್ಟು ಸುಸಜ್ಜಿತ ಕೊಠಡಿಗಳನ್ನು ನಿರ್ಮಿಸಬೇಕೆಂದು, ಅದು ಎಲ್ಲರಿಗೂ ಉಪಯುಕ್ತವಾಗುವಂತೆ ಅವಕಾಶ ಕಲ್ಪಿಸಬೇಕೆಂದು ಸಭೆಯು ಸೂಚಿಸಿತು.** |

**ವಿದ್ವಾನ್ ಪಿ.ಆರ್. ಪಾಗೋಜಿ**
ಸದಸ್ಯ ಕಾರ್ಯದರ್ಶಿ

**ಪ್ರೊ. ಪದ್ಮಾಶೇಖರ್**
ಅಧ್ಯಕ್ಷರು